ದಿನಾಂಕಃ 08-11-2022 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಶ್ರೀಮತಿ ವಿ.ಬಿ. ವಕೀಲರಿಂದಃ-**

ನಾನು ಹಾಗೂ ವಾದಿ ಒಂದೇ ಊರಿನವರಾಗಿರುತ್ತೇವೆ. ಅನುಸೂಯಮ್ಮ ಹಣ ಕೊಟ್ಟಿರುವ ಬಗ್ಗೆ ಈ ಕೇಸನ್ನು ಹಾಕಿದ್ದಾರೆ. ಈಗ 4 ವರ್ಷದ ಹಿಂದೆ ಅನುಸೂಯಮ್ಮ 6 ಲಕ್ಷವನ್ನು ಕೊಟ್ಟಿದ್ದರು. 6 ಲಕ್ಷ ಕೊಡುವ ಪೂರ್ವದಲ್ಲಿ ಯಾವುದೇ ಮಾತುಕತೆ ಆಗಿರಲಿಲ್ಲ. 6 ಲಕ್ಷ ಅದೇ ದಿನ ಕೊಡಲಾಯಿತು. ಆ ದಿನ 6 ಲಕ್ಷ ರೂ.ಗಳನ್ನು 500 ರೂ. ಮುಖಬೆಲೆಯ ನೋಟಿನಲ್ಲಿ ಕೊಟ್ಟರು. ಎಷ್ಟು ನೋಟು ಇತ್ತು ಎಂದು ನನಗೆ ಗೊತ್ತಿಲ್ಲ. ಪತ್ರವನ್ನು ಮಧ್ಯಾಹ್ನ 1 ಗಂಟೆಗೆ ಬರೆಯಲಾಯಿತು. ಪತ್ರ ಬರೆಯುವಾಗ ನಾನು, ವಾದಿ, ಪ್ರತಿವಾದಿ, ಲತಾಮಣಿ ಹಾಗೂ ವೆಂಕಟೇಶಮೂರ್ತಿ ಹಾಜರಿದ್ದರು. ಪತ್ರ ಬರೆಯಲು ಮಾಹಿತಿಯನ್ನು ವಾದಿ ಕೊಟ್ಟಿರುತ್ತಾರೆ. ಆ ದಿನ ಪತ್ರ ಬರೆದರು ಎಂದು ನನಗೆ ಗೊತ್ತು ಆದರೆ ಎಷ್ಟು ಪತ್ರ ಬರೆದರು ಎಂದು ಗೊತ್ತಿಲ್ಲ. ಆ ದಿನ ನಾನು ಒಂದೇ ಸಹಿ ಹಾಕಿದ್ದೇನೆ. ಆ ದಿನ ನಾನು, ಲತಾಮಣಿ, ಅನುಸೂಯಮ್ಮ ಸಹಿ ಹಾಕಿದ್ದೇವೆ. ವೆಂಕಟೇಶಮೂರ್ತಿ ಬರೆದರು. ಅನುಸೂಯಮ್ಮ ಚೀಟಿ ವ್ಯವಹಾರ ಮಾಡುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅನುಸೂಯಮ್ಮನ ಚೀಟಿ ವ್ಯವಹಾರದಲ್ಲಿ 25 ಜನ ಇದ್ದರು ಎನ್ನುವುದು ನನಗೆ ಗೊತ್ತಿಲ್ಲ. ತಿಂಗಳಿಗೆ ಒಂದು ಸಾವಿರ ರೂ.ಗಳನ್ನು ಕಟ್ಟುವಂತಹ ಚೀಟಿ ಎನ್ನುವುದು ನನಗೆ ಗೊತ್ತಿಲ್ಲ. ಪತ್ರ ಬರೆದಿರುವ ಬಗ್ಗೆ ಹಾಗೂ ವಾದಿ ಹಣವನ್ನು ಕೊಟ್ಟಿರುವ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎನ್ನುವುದು ಸರಿಯಲ್ಲ. ವಾದಿ ಹೇಳಿದ ಪ್ರಕಾರ ನಾನು ನ್ಯಾಯಾಲಯದ ಮುಂದೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು, ಲತಾಮಣಿ, ವೆಂಕಟೇಶಮೂರ್ತಿ ಹಾಗೂ ವಾದಿ ಸೇರಿ ನಿಪಿ-1 ಹಾಗೂ 2 ನ್ನು ಸೃಷ್ಟಿ ಮಾಡಿದ್ದೇವೆ ಎನ್ನುವುದು ಸುಳ್ಳು. ಪ್ರತಿವಾದಿಯ ತಾಯಿ ಚೀಟಿ ವ್ಯವಹಾರದ

ಭದ್ರತೆಗಾಗಿ ಕೊಟ್ಟ  ಖಾಲಿ ಚೆಕ್ ಹಾಗೂ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ನಾವು ಅದರಲ್ಲಿ ಹಣವನ್ನು ನಮಗೆ ಬೇಕಾದಂತೆ ತುಂಬಿಸಿ ಸುಳ್ಳು ಕೇಸನ್ನು ಹಾಕಿದ್ದೇವೆ ಎನ್ನುವುದು ಸರಿಯಲ್ಲ. ಅನುಸೂಯಮ್ಮ ನಡೆಸುತ್ತಿದ್ದ ಚೀಟಿಗೆ ಜಯಮ್ಮ ಮೆಂಬರ್ ಆಗಿದ್ದರು ಎನ್ನುವ ವಿಷಯ ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಅನಿತ, ಜಿ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.